**ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ. ಗೋವಿಂದರಾಜು ಇವರು ನಿಯಮ 72ರಡಿ ಪ್ರಸ್ತಾಪಿಸಿರುವ ಸೂಚನೆಗೆ ಮಾನ್ಯ ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಹಾಗೂ ಜೀವನೋಪಾಯ ಸಚಿವರ ಹೇಳಿಕೆ.**

ವಿಷಯ:

ಸಮಾಜಕ್ಕೆ ಬುನಾದಿ ಹಾಕುವ ವೈದ್ಯಕೀಯ ಶಿಕ್ಷಣದ ಆಶಯಗಳನ್ನೇ ಹೊಸಕಿ ಹಾಕುತ್ತಿರುವುದು ವಿಪರ್ಯಾಸ, ಭಾರತದಲ್ಲಿ ಬಡ ವಿದ್ಯಾರ್ಥಿಯೊಬ್ಬ ವೈದ್ಯಕೀಯ ಕೋರ್ಸ್‌ನ ಸಮೀಪ ಧಾವಿಸಲೂ ಸಾಧ್ಯವಾಗದಂಥ ಸ್ಥಿತಿ ದಶಕಗಳಿಂದಲೂ ಇದೆ. ಪ್ರಸ್ತುತ ವೈದ್ಯಕೀಯ ಕೋರ್ಸ್ ಮಧ್ಯಮ ವರ್ಗದ ಆಕರ್ಷಣೆಯಾಗಿರುವುದಲ್ಲದೆ. ಶ್ರೀಮಂತ ಹಿನ್ನೆಲೆಯ ವಿದ್ಯಾರ್ಥಿಗಳಿಗೆ ಕೈಗೆಟುಕುವ ಕುಸುಮ. ವಿದ್ಯಾರ್ಥಿಗಳ ಆಕಾಂಕ್ಷೆ ಬೇಡಿಕೆಯನ್ನೇ ಬಂಡವಾಳ ಮಾಡಿಕೊಂಡಿರುವ ಸರಕಾರ ಹಾಗೂ ಖಾಸಗಿ ಕಾಲೇಜು ವೈದ್ಯಕೀಯ ಕೋರ್ಸ್‌ಗೆ ಶೇ.10ರಷ್ಟು ಶುಲ್ಕ ಹೆಚ್ಚಿಸಲು ಒಪ್ಪಿಕೊಂಡಿರುವುದು ಸರಿಯಲ್ಲ. ಇದು ಮಧ್ಯಮ ವರ್ಗದ ವಿದ್ಯಾರ್ಥಿಗಳಲ್ಲಿ ಎಂಬಿಬಿಎಸ್ ಮಾಡಬೇಕೆ, ಬೇಡವೇ ಎಂಬ ಪ್ರಶ್ನೆಯನ್ನು ಹುಟ್ಟುಹಾಕಿದೆ. ಈ ಹಿನ್ನೆಲೆಯಲ್ಲಿ ಈ ವಿಷಯವನ್ನು ಮಾನ್ಯ ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಸಚಿವರಿಗೆ ಪ್ರಸ್ತಾಪಿಸ ಬಯಸುತ್ತೇನೆ.

ಉತ್ತರ:

2023-24ನೇ ಸಾಲಿನ ಶೈಕ್ಷಣಿಕ ವರ್ಷದ ವೈದ್ಯಕೀಯ ಮತ್ತು ದಂತ ವೈದ್ಯಕೀಯ ಸ್ನಾತಕ ಮತ್ತು ಸ್ನಾತಕೋತ್ತರ ಕೋರ್ಸುಗಳು ಸೀಟುಗಳ ಪ್ರವೇಶ ಶುಲ್ಕವನ್ನು ನಿಗದಿಪಡಿಸಿರುವ ಕುರಿತು ಕರ್ನಾಟಕ ಪ್ರೊಫೆಷನಲ್ ಕಾಲೇಜಸ್ ಫೌಂಡೇಷನ್ (KPCF), ಕರ್ನಾಟಕ ರಿಲೀಜಿಯಸ್ ಮತ್ತು ಲಿಂಗ್ವಿಸ್ಟಿಕ್ ಮೈನಾರಿಟಿ ಪ್ರೊಫೆಷನಲ್ ಕಾಲೇಜಸ್ ಅಸೋಸಿಯೇಷನ್ (KRLMPCA) ಮತ್ತು ಅಸೋಸಿಯೇಷನ್ ಆಫ್ ಮೈನಾರಿಟಿ ಪ್ರೊಫೆಷನಲ್ (AMPCK) ಈ ಮೂರು ಸಂಘಗಳಡಿಯಲ್ಲಿ ಬರುವ ಖಾಸಗಿ ವೈದ್ಯಕೀಯ ಮತ್ತು ದಂತ ವೈದ್ಯಕೀಯ ಕಾಲೇಜುಗಳಲ್ಲಿ 2020-21ನೇ ಸಾಲಿನಿಂದ 2023-24ನೇ ಸಾಲಿನವರೆಗೆ ಸರ್ಕಾರಿ ಕೋಟಾದ ಸ್ನಾತಕ ಮತ್ತು ಸ್ನಾತಕೋತ್ತರ ಕೋರ್ಸುಗಳ ಸೀಟುಗಳಿಗೆ ಪ್ರವೇಶ ಶುಲ್ಕದಲ್ಲಿ ಯಾವುದೇ ಹೆಚ್ಚುವರಿ ಮಾಡಿರುವುದಿಲ್ಲ.

ಕರ್ನಾಟಕ ಪ್ರೊಫೆಷನಲ್ ಕಾಲೇಜಸ್ ಫೌಂಡೇಷನ್ (KPCF), ಕರ್ನಾಟಕ ರಿಲೀಜಿಯಸ್ ಮತ್ತು ಲಿಂಗ್ವಿಸ್ಟಿಕ್ ಮೈನಾರಿಟಿ ಪ್ರೊಫೆಷನಲ್ ಕಾಲೇಜಸ್ ಅಸೋಸಿಯೇಷನ್ (KRLMPCA) ಮತ್ತು ಅಸೋಸಿಯೇಷನ್ ಆಫ್ ಮೈನಾರಿಟಿ ಪ್ರೊಫೆಷನಲ್ ಕಾಲೇಜಸ್ ಇನ್ ಕರ್ನಾಟಕ (AMPCK) ಈ ಮೂರು ಸಂಘಗಳಡಿಯಲ್ಲಿ ಬರುವ ಖಾಸಗಿ ವೈದ್ಯಕೀಯ ಮತ್ತು ದಂತ ವೈದ್ಯಕೀಯ ಕಾಲೇಜುಗಳಲ್ಲಿ 2020-21 ಹಾಗೂ 2021-22ನೇ ಸಾಲಿನಲ್ಲಿ ಖಾಸಗಿ ಕೋಟಾದ ಸೀಟುಗಳಿಗೆ ಯಾವುದೇ ಶುಲ್ಕವನ್ನು ಹೆಚ್ಚಿಸಿರುವುದಿಲ್ಲ.

ಆದರೆ, ಕರ್ನಾಟಕ ರಿಲೀಜಿಯಸ್ ಮತ್ತು ಲಿಂಗ್ವಿಸ್ಟಿಕ್ ಮೈನಾರಿಟಿ ಪ್ರೊಫೆಷನಲ್ ಕಾಲೇಜಸ್ ಅಸೋಸಿಯೇಷನ್ (KRLMPCA) ಮತ್ತು ಅಸೋಸಿಯೇಷನ್ ಆಫ್ ಮೈನಾರಿಟಿ ಪ್ರೊಫೆಷನಲ್ ಕಾಲೇಜಸ್

ಇನ್ ಕರ್ನಾಟಕ (AMPCK) ಈ ಎರಡೂ ಸಂಘಗಳಡಿಯಲ್ಲಿ ಬರುವ ಖಾಸಗಿ ವೈದ್ಯಕೀಯ ಮತ್ತು ದಂತ ವೈದ್ಯಕೀಯ ಕಾಲೇಜುಗಳಲ್ಲಿ 2022-23ನೇ ಸಾಲಿನಲ್ಲಿ ಖಾಸಗಿ ಕೋಟಾದ ಸೀಟುಗಳಿಗೆ ಶುಲ್ಕವನ್ನು ಹೆಚ್ಚಿಸಲು ಮನವಿ ಸಲ್ಲಿಸಿದ್ದರಿಂದ 2022-23ನೇ ಸಾಲಿನಿಂದ ಜಾರಿಗೆ ಬರುವಂತೆ ಖಾಸಗಿ ಕೋಟಾದ ಸೀಟುಗಳಿಗೆ ಶೇ.10ರಷ್ಟು ಶುಲ್ಕವನ್ನು ಹೆಚ್ಚಿಸಲಾಗಿರುತ್ತದೆ.

ತದನಂತರ, ಕರ್ನಾಟಕ ಪ್ರೊಫೆಷನಲ್ ಕಾಲೇಜಸ್ ಫೌಂಡೇಷನ್ (KPCF) ಸಂಘದಡಿಯಲ್ಲಿ ಬರುವ ಖಾಸಗಿ ವೈದ್ಯಕೀಯ ಮತ್ತು ದಂತ ವೈದ್ಯಕೀಯ ಕಾಲೇಜುಗಳಲ್ಲಿ 2023-24ನೇ ಸಾಲಿಗೆ ಅನ್ವಯಿಸುವಂತೆ ಕರ್ನಾಟಕ ರಿಲೀಜಿಯಸ್ ಮತ್ತು ಲಿಂಗ್ವಿಸ್ಟಿಕ್ ಮೈನಾರಿಟಿ ಪ್ರೊಫೆಷನಲ್ ಕಾಲೇಜಸ್ ಅಸೋಸಿಯೇಷನ್ (KRLMPCA) ಮತ್ತು ಅಸೋಸಿಯೇಷನ್ ಆಫ್ ಮೈನಾರಿಟಿ ಪ್ರೊಫೆಷನಲ್ ಕಾಲೇಜಸ್ ಇನ್ ಕರ್ನಾಟಕ (AMPCK) ಈ ಎರಡೂ ಸಂಘಗಳಡಿಯಲ್ಲಿ ಬರುವ ಖಾಸಗಿ ವೈದ್ಯಕೀಯ ಮತ್ತು ದಂತ ವೈದ್ಯಕೀಯ ಕಾಲೇಜುಗಳಲ್ಲಿ 2022-23ನೇ ಸಾಲಿಗೆ ಖಾಸಗಿ ಕೋಟಾದ ಸೀಟುಗಳಿಗೆ ನಿಗಧಿಪಡಿಸಿರುವ ಶುಲ್ಕಕ್ಕೆ ಸಮಾನವಾಗಿ ಹೆಚ್ಚಿಸಲು ಕೋರಿದ್ದರಿಂದ, ಕರ್ನಾಟಕ ಪ್ರೊಫೆಷನಲ್ ಕಾಲೇಜಸ್ ಫೌಂಡೇಷನ್ (KPCF) ಸಂಘದಡಿಯಲ್ಲಿ ಬರುವ ಖಾಸಗಿ ವೈದ್ಯಕೀಯ ಮತ್ತು ದಂತ ವೈದ್ಯಕೀಯ ಕಾಲೇಜುಗಳಲ್ಲಿ 2023-24ನೇ ಸಾಲಿನಿಂದ ಜಾರಿಗೆ ಬರುವಂತೆ ಖಾಸಗಿ ಕೋಟಾದ ಸೀಟುಗಳಿಗೆ ಶೇ.10ರಷ್ಟು ಶುಲ್ಕವನ್ನು ಹೆಚ್ಚಿಸಲಾಗಿರುತ್ತದೆ.

No: MED 149 RGU 2023

(ಡಾ:ಶರಣ ಪ್ರಕಾಶ ಆರ್. ಪಾಟೀಲ)
ಮಾನ್ಯ ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ,
ಉದ್ಯಮಶೀಲತೆ ಹಾಗೂ ಜೀವನೋಪಾಯ ಸಚಿವರು